ಪ್ರತಿಕೃತಿಗಳನ್ನು ಇಲ್ಲಿ ನಿರ್ಮಿಸಿದ್ದಾರೆ. ಒಳಗೆ ಪ್ರವೇಶಿಸಲು ಶುಲ್ಕವಿರಲಿಲ್ಲ. ಆದರೆ ಆಳೆತ್ತರದ ಟೈರನೋಸಾರಸ್ ರೆಕ್ಸ್‌ನ ಬಾಯೊಳಗೆ ಪ್ರವೇಶಿಸಲು $7 ಶುಲ್ಕವಿತ್ತು. ದೈತ್ಯಾಕಾರದ ಬ್ರೋಂಟೋಸಾರಸ್ ಹೊಟ್ಟೆಯನ್ನೇ ಗಿಫ್ಟ್ ಶಾಪ್ ಆಗಿ ಪರಿವರ್ತಿಸಿದ್ದರು. ಇತರ ವಿವಿಧ ಸಣ್ಣ ಡೈನಾಸಾರ್, ಮೊಸಳೆ, ಆಮೆಗಳೂ ಇವೆ. ಒಳಗೆ ಸೇರಿ ಫೋಟೋ ತೆಗೆಯಲು ಕೋರೆಹಲ್ಲುಗಳ ದೈತ್ಯ ದಿನೋಸಾರಿನ ತಲೆಯನ್ನೇ ನಿರ್ಮಿಸಿದ್ದಾರೆ.

ಇಲ್ಲಿ ವರ್ಷವಿಡೀ ಗಾಳಿಯ ವೇಗ ಗರಿಷ್ಠ ಪ್ರಮಾಣದಲ್ಲಿ ಇರುವುದರಿಂದ, ಹೆದ್ದಾರಿಯ ಇಕ್ಕೆಲಗಳಲ್ಲಿ ಸಾವಿರಾರು ದೈತ್ಯಾಕಾರದ ಪವನಯಂತ್ರಗಳು ಕಾಣಸಿಗುತ್ತವೆ. ಉತ್ತರ ಅಮೆರಿಕಾದಲ್ಲಿಯೇ ಅತಿ ಹೆಚ್ಚಿನ ವಿಂಡ್ ಮಿಲ್ ವಿದ್ಯುಚ್ಛಕ್ತಿ ಉತ್ಪಾದನೆ ಇಲ್ಲಿ ಆಗುತ್ತಿದೆ. ಸುಮಾರು 2 ಲಕ್ಷ ಮನೆಗಳಿಗೆ ವಿದ್ಯುತ್ ಸರಬರಾಜು ಇಲ್ಲಿಂದಲೇ ಆಗುತ್ತದೆ.

## ರೋಬೋ ಲೈಟ್ಸ್

ಒಂದು ವಿಶಾಲವಾದ ಪಾರ್ಕಿನ ಒಂದಿಂಚೂ ಬಿಡದೆ , ತ್ಯಾಜ್ಯ ವಸ್ತು–ಗಳಿಂದಲೇ ನಿರ್ಮಿಸಿದ ವಿವಿಧ ಆಕೃತಿಗಳು, ನಿರುಪಯೋಗಿ ಕಮೋಡ್, ಮೈಕ್ರೊವೇವ್ ಒಲೆ, ಕಂಪ್ಯೂಟರ್, ನೀರಿನ ಬಾಟಲಿ, ಕಾರಿನ ಬಿಡಿ ಭಾಗ, ತಲೆ ಬುರುಡೆಗಳಿಂದ ಮಾಡಿದ ಚಲಿಸುವ ಅದ್ಭುತ ರಚನೆಗಳು ಬೆರಗುಗೊಳಿ–ಸುತ್ತವೆ. ರಾತ್ರಿ ಹೊತ್ತು 30 ಲಕ್ಷ ಬಣ್ಣದ ದೀಪಗಳಿಂದ ಅಲಂಕೃತವಾಗುವ ಈ ಪ್ರದೇಶಕ್ಕೆ ರೋಬೋ ಲೈಟ್ಸ್ ಅನ್ವರ್ಥನಾಮವೇ ಸರಿ. ಪ್ರವೇಶ ಶುಲ್ಕವೇನಿಲ್ಲ. $5 ದೇಣಿಗೆ ಬೇಕಾದರೆ ನೀಡಬಹುದು.

ಮರುದಿನ 55 ಕಿ ಮೀ ಕ್ರಮಿಸಿ ಕಾಟನ್‌ವುಡ್ ಸಂದರ್ಶಕರ ಕೇಂದ್ರದ ಒಳಹೊಕ್ಕು, ವಾಹನ ನಿಲುಗಡೆ ಶುಲ್ಕ ತೆತ್ತು, ರಸ್ತೆ ನಕ್ಷೆ ಪಡೆದುಕೊಂಡೆವು. ಹೋಚಿಲ್ಲಾ ಕಣಿವೆಯ ಹೊರಗೆ ಜೋಷುವಾ ಮರಗಳ ರಾಷ್ಟ್ರೀಯ ಉದ್ಯಾನ ವಿಸ್ತಾರವಾಗಿ ಹರಡಿದೆ. ಮರುಭೂಮಿಯ ಗಾಳಿ, ನೀರು, ಶಾಖದಿಂದ ರೂಪಿಸಲ್ಪಟ್ಟ ಚಿತ್ರ ವಿಚಿತ್ರ ಕಲ್ಲಿನ ಆಕೃತಿಗಳು, ಮರದ ಕಾಂಡಗಳು, ಪ್ರವಾಸಿ–ಗಳಿಗೆ ಚಾರಣ ಮತ್ತು ರಾತ್ರಿಯಲ್ಲಿ ನಕ್ಷತ್ರ ವೀಕ್ಷಣೆಗೆ ಅವಕಾಶವನ್ನು ಒದಗಿಸುತ್ತದೆ. ವರ್ಷದಲ್ಲಿ ಒಂದು ದಿನ, ಜಗತ್ತಿನ ಎಲ್ಲೆಡೆಗಳಿಂದ ವಿಜ್ಞಾನಿಗಳು ಆಕಾಶ ವೀಕ್ಷಣೆಗೆ ಇಲ್ಲಿ ಬಂದು ಸೇರುತ್ತಾರೆ. ಏಕೆಂದರೆ ಇಲ್ಲಿ ಕಾಣಸಿಗುವ ಶುಭ್ರ ಆಕಾಶ ಬೇರೆ ಯಾವ ನಗರಗಳಲ್ಲೂ ಕಾಣ ಸಿಗುವುದು ದುರ್ಲಭ.

ನಮ್ಮ ಮೊದಲ ನಿಲುಗಡೆ ಚೊಲ್ಲ ಕ್ಯಾಕ್ಟಸ್ ಉದ್ಯಾನವಾಗಿತ್ತು. ರಸ್ತೆಯ ಇಕ್ಕೆಲಗಳಲ್ಲಿ ಬೆಳ್ಳಗಿನ, ಸುಂದರ ಚೊಲ್ಲ ಕ್ಯಾಕ್ಟಸ್ ಕಂಡೆವು. ಅಮೆರಿಕನ್ ಇಂಡಿಯನ್ ಭಾಷೆಯಲ್ಲಿ ಕ್ಯಾಕ್ಟಸ್‌ನ ಮುಳ್ಳಿನ ಭಾಗಗಳು ಮನುಷ್ಯನ ಚರ್ಮಕ್ಕೆ ಅಂಟಿಕೊಳ್ಳುವುದಕ್ಕೆ ಚೊಲ್ಲ ಎಂದು ಹೆಸರು. ಗಿಡಗಳ ಹತ್ತಿರ ಹೋಗಬೇಡಿ ಎಂದು ಎಲ್ಲೆಡೆ ಸೂಚನಾ ಫಲಕಗಳನ್ನು ಹಾಕಿದ್ದರು. ಮುಂದಕ್ಕೆ ಪ್ರಯಾಣಿಸುತ್ತಾ ತಲೆಬುರುಡೆಯನ್ನು ಹೋಲುವ ಬಾರೀ ಗಾತ್ರದ ಬಂಡೆಗಳು ಗೋಚರಿಸಿದವು.

ಆನೆಯಾಕಾರದ ಬೃಹತ್ ಬಂಡೆಗಳು ಕಾಣಸಿಕ್ಕವು. ವಾಸಿಸಲು ಎಲ್ಲ ಸೌಲಭ್ಯಗಳಿರುವ ಕ್ಯಾಂಪ್ ಗ್ರೌಂಡ್ ಇಲ್ಲಿ ಲಭ್ಯ. ಕಣ್ಣು ಹಾಯಿಸಿದಲ್ಲೆಲ್ಲಾ ಸುಂದರ ಜೋಷುವಾ ಮರಗಳನ್ನು ನೋಡಿ ಆನಂದಿಸುತ್ತಾ, 20ಕಿ.ಮೀ ಕ್ರಮಿಸಿ ಕೀಸ್ ವ್ಯೂ ತಲಪಿದೆವು. ಹೋಚಿಲ್ಲಾ ಕಣಿವೆ ಮತ್ತು ಕೊಲಾರಾಡೊ ಮರುಭೂಮಿಯ ಸಂಗಮವಾದ ಈ ಎತ್ತರದ ಪ್ರದೇಶದಿಂದ ಸುಂದರವಾದ ಸೂರ್ಯಾಸ್ತವನ್ನು ವೀಕ್ಷಿಸುವುದು ನಮ್ಮ ಉದ್ದೇಶವಾಗಿತ್ತು. ಎತ್ತರವಾದ






